# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

## ಬೈರಸಂದ್ರ , ಹೊಸ ವಾರ್ಡ ಸಂಖ್ಯೆ: 196 (ಹಳೆಯ ವಾರ್ಡ ಸಂಖ್ಯೆ: 168 & 169)

**ದಿನಾಂಕ:01.10.2022 ರಂದು ಹೊಸ ವಾರ್ಡ ಸಂಖ್ಯೆ 196 ಬೈರಸಂದ್ರ ವಾರ್ಡನಲ್ಲಿ ನಡೆದ ವಾರ್ಡ ಸಮಿತಿ ಸಭೆ:**

## -: ಸಮಿತಿ ಸಭೆಯ ನಡವಳಿಗಳು :-

ವಾರ್ಡ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ ಸಮಿತಿ ಸದಸ್ಯರು:-

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲು ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಂದ್ರಶೇಖರ್ ವಿ | ಕಾರ್ಯಾದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ರಾಮಚಂದ್ರ .ಸಿ | ಹಿರಿಯ ಆರೋಗ್ಯ-168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 04 | ಶ್ರೀ ರಮೇಶ್ ವಿ ಬಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 05 | ಶ್ರೀ ನರೇಂದ್ರ ಬಾಬು | ಅರಣ್ಯ ಇಲಾಖೆ (ದಕ್ಷಿಣ) , ಬಿ.ಬಿ.ಎಂ.ಪಿ |
| 06 | ಶ್ರೀಮತಿ ಮೊನಂ ಬಿ | ಹಿರಿಯ ಆರೋಗ್ಯ-169 ನಿರೀಕ್ಷಕರು, ಬಿ.ಬಿ.ಎಂ.ಪಿ |
| 07 | ಶ್ರೀ ರಮೇಶ್ ಬಂದ್ರದ | Pro.PSI ತಿಲಕ್‌ನಗರ ಪೋಲಿಸ್ ಠಾಣೆ |
| 08 | ಶ್ರೀ ಮಧು.ಎನ್ | SWI ವಾರ್ಡ -168 |
| 09 | ಶ್ರೀ ಗೋವಿಂದರಾಜ್ | SWM ಜಯನಗರ |
| 10 | ಶ್ರೀ ನಾಗರಾಜ್ ಎ.ಕೆ | PC ಮೈಕೋ ಸಂಚಾರಿ ಪೋಲಿಸ್ ಠಾಣೆ |
| 11 | ಶ್ರೀ ಈರಪ್ಪ ಗೋದಿ | PC ಮೈಕೋ ಸಂಚಾರಿ ಪೋಲಿಸ್ ಠಾಣೆ |
| 12 | ವಾರ್ಡ 169 ರ ಸ್ಥಳಿಯ ನಿವಾಸಿಗಳ ಸಂಘ ಮತ್ತು ಸಾರ್ವಜನಿಕರು | |

ವಾರ್ಡ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ದಿನಾಂಕ 17.09.2022 ರಂದು ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಹಾಗೂ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಮಾಹಿತಿ ಪಡೆದುಕೊಂಡರು.

2. ಹಳೆಯ ವಾರ್ಡ ಸಂಖ್ಯೆ 169 ರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Shoulder drain ಮಾಡಿದ್ದು, ಆದರೆ Shoulder drain ಗಳಿಗೆ Steel Grating ಅಳವಡಿಸಿರುದಿಲ್ಲ ಮತ್ತು ಇನ್ನು ಅನೇಕ ಕಡೆ Shoulder drain ನಿರ್ಮಾಣ ಮಾಡುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWD (South), ಬಿ.ಬಿ.ಎಂ.ಪಿ)**

3. ಹಳೆಯ ವಾರ್ಡ ಸಂಖ್ಯೆ 169 ರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Strom water drain (SWD) ಮೇಲೆ ವಾಹನಗಳನ್ನು ಪಾರ್ಕ ಮಾಡುತ್ತಿದ್ದು. ಇದರಿಂದ ಪಾದಚಾರಿ ಮಾರ್ಗದ ಮೇಲೆ ಸಾರ್ವಜನಿಕರು ಓಡಾಡಲು ತುಂಬಾ ತೊಂದರೆಯಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

Scanned with CamScanner

4. LIC ಕಾಲೋನಿನಲ್ಲಿರುವ 3ನೇ ಅಡ್ಡರಸ್ತೆ ಮತ್ತು 5ನೇ ಅಡ್ಡರಸ್ತೆ ನಲ್ಲಿರುವ ಮರದ ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು, ಸದರಿ ರಸ್ತೆಗಳಲ್ಲಿರುವ ಮರದ ಕೊಂಬೆಗಳನ್ನು ಕತ್ತರಿಸುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

5. ಹಳೆಯ ವಾರ್ಡ ಸಂಖ್ಯೆ 168 ಮತ್ತು 169 ರಲ್ಲಿರುವ ವಾರ್ಡರಲ್ಲಿರುವ ಅನೇಕ ಪಾರ್ಕ್‌ನಲ್ಲಿ ಸೊಳ್ಳೆಗಳು ತುಂಬಾ ಹೆಚ್ಚಾಗಿದ್ದು, ಪಾರ್ಕ್‌ಗಳಲ್ಲಿನ ಸೊಳ್ಳೆಗಳನ್ನು ನಿಯಂತ್ರಿಸಲು ಸೊಳ್ಳೆ ಔಷದಿಯನ್ನು ಸಿಂಪಡಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಜಯನಗರ)**

6. ಈತ್ತಿಚೀನ ದಿನಗಳಲ್ಲಿ ನಡೆಯುತ್ತಿರುವ ಸೈಬರ್ ಕ್ರೈಮ್ ಪ್ರಕರಣಗಳ ಹೆಚ್ಚಾಗುತ್ತಿದ್ದು, ಇದರ ಬಗ್ಗೆ ಜನ ಜಾಗೃತಿ ಮುಡಿಸಲು ವಾರ್ಡ ಮಟ್ಟದಲ್ಲಿ ಸಭೆಯನ್ನು ಆಯೋಜಿಸಲು ಪೋಲಿಸ್ ಇಲಾಖೆಗೆ ಕೋರಿದರು. **(ಕ್ರಮ: ಜಯನಗರ ಮತ್ತು ತಿಲಕ್‌ನಗರ ಪೋಲಿಸ್ ಠಾಣೆ)**

7. LIC ಕಾಲೋನಿನಲ್ಲಿರುವ 5ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆಯಲ್ಲಿ (ಗಣೇಶ ದೇವಸ್ಥಾನ ಹಿಂಭಾಗ) ಕಸದ ಪ್ರಮಾಣ ಹೆಚ್ಚಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWM ಜಯನಗರ, ಬಿ.ಬಿ.ಎಂ.ಪಿ)**

8. 10ನೇ ಅಡ್ಡರಸ್ತೆಯಲ್ಲಿರುವ ಗಣೇಶ ದೇವಸ್ಥಾನ ಹಿಂದಗಡೆಯಲ್ಲಿರುವ ಖಾಲಿ ಜಾಗದಲ್ಲಿ ಜಾಗದಲ್ಲಿ ಕಸದ ಪ್ರಮಾಣ ಹೆಚ್ಚಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWM ಜಯನಗರ, ಬಿ.ಬಿ.ಎಂ.ಪಿ)**

9. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನ ಮರಗಳಲ್ಲಿರುವ ಒಣಗಿದ ಕೊಂಬೆಗಳು ಮತ್ತು ಮರದ ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಅಂತಹ ಕೊಂಬೆಗಳನ್ನು ಕತ್ತರಿಸಿ ತೆಗೆಯುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

10. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ 37ನೇ ಅಡ್ಡರಸ್ತೆ ಹಾಗೂ 26ನೇ ಮುಖ್ಯರಸ್ತೆಯಲ್ಲಿನ ಮರದ ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಅಂತಹ ಕೊಂಬೆಗಳನ್ನು ಕತ್ತರಿಸಿ ತೆಗೆಯುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

**ನಿರ್ಣಯ:** ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ವರದಿ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್.ವಿ)
ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಮಿತಿ ಸಭೆ
ಹೂಸ ವಾರ್ಡ-196 ಬೈರಸಂದ್ರ (ಹಳೆಯ ವಾರ್ಡ 168&169)

(ಶ್ರೀ ವಾಲು ರಾಥೋಡ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ ಸಭೆ
ಹೂಸ ವಾರ್ಡ-196 ಬೈರಸಂದ್ರ (ಹಳೆಯ ವಾರ್ಡ 168&169)

1. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ವಲಯ ಆಯುಕ್ತರು (ದಕ್ಷಿಣ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ.

Scanned with CamScanner